# ಶ್ರೀಚೈತನ್ಯ ಮಹಾಪ್ರಭು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸ್ವಾಮಿ ತಪಸ್ಯಾನಂದ

ನಿಮಾಯಿಯಲ್ಲಿ ಕೆಲವು ದೈವೀ ಚಿಹ್ನೆಗಳೂ ವ್ಯಕ್ತವಾಗಲು ಆರಂಭಿಸಿದವು. ಗ್ರಾಮದ ವೃದ್ಧ ಮಹಿಳೆಯರ ಜತೆಗೆ ಈ ವಿಚಾರವಾಗಿ ಚರ್ಚಿಸಿದ ಶಚೀದೇವಿ, ನಿಮಾಯಿಯನ್ನು ದುಷ್ಟ ಶಕ್ತಿಯೊಂದು ಹಿಡಿದುಬಿಟ್ಟಿದೆ ಎಂದು ನಂಬಿದಳು. ದೇವಿ ಷಷ್ಠಿಗೆ ಬಲಿ ಸಲ್ಲಿಸಿದರೆ ಆ ಶಕ್ತಿಗಳ ಹಿಡಿತದಿಂದ ಮಗುವನ್ನು ಪಾರುಮಾಡಬಹುದು ಎಂದೂ ಎಣಿಸಿದಳು. ಷಷ್ಠಿದೇವಿಗೆ ನೈವೇದ್ಯಗಳನ್ನು ತಯಾರಿಸಿ, ದೇವಸ್ಥಾನಕ್ಕೆ ತೆಗೆದುಕೊಂಡು ಹೋಗುತ್ತಿದ್ದಾಗ, ನಿಮಾಯಿ ಅನಿರೀಕ್ಷಿತವಾಗಿ ಅವಳ ಮುಂದೆ ಪ್ರತ್ಯಕ್ಷನಾದ. ತನ್ನ ತಣಿಯದ ಹಸಿವೆಯನ್ನು ತಣಿಸಲು ಆ ಉಣಿಸುಗಳನ್ನು ಕೊಡುವಂತೆ ಒತ್ತಾಯಿಸಿದ. ಅವನ್ನು ತಾಯಿಯಿಂದ ಕಿತ್ತುಕೊಂಡೂ ಬಿಟ್ಟ. ಇನ್ನೊಂದು ದಿನ, ಐದು ವರ್ಷ ವಯಸ್ಸಾದಾಗ, ಅತೀವ ವ್ಯಗ್ರನಾಗಿ ಅಳುವುದಕ್ಕೆ ಆರಂಭಿಸಿದ. ಯಾವ ಸಮಾಧಾನವೂ ಅವನನ್ನು ಶಾಂತಗೊಳಿಸಲಿಲ್ಲ. ಕಡೆಗೆ 'ನಿನಗೇನು ಬೇಕು?' ಎಂದು ಪ್ರಶ್ನಿಸಿದಾಗ 'ಜಗದೀಶ ಮತ್ತು ಹಿರಣ್ಯ ಎಂಬ ಇಬ್ಬರು, ದೇವರಿಗೆ ನೈವೇದ್ಯಗಳನ್ನು ತಯಾರಿಸಿದ್ದಾರೆ. ಅವು ನನಗೆ ಬೇಕು' ಎಂದು ಉತ್ತರಿಸಿದ. ಅಹಾ! ಎಂತಹ ಅಚ್ಚರಿಗೊಳಿಸುವ ಬೇಡಿಕೆ! ಬಾಲಕ ಹೆಸರಿಸಿದ ಆ ಇಬ್ಬರು ವ್ಯಕ್ತಿಗಳು ಶ್ರದ್ಧಾವಂತ ಬ್ರಾಹ್ಮಣರು. ಏಕಾದಶಿಯ ದಿನವನ್ನು ಉಪವಾಸದಲ್ಲಿ ಕಳೆದು ಮರುದಿನ ಶ್ರೀಕೃಷ್ಣನಿಗೆ ನಿವೇದಿಸಲೆಂದು ಹಲವು ತಿನಿಸುಗಳನ್ನು ತಯಾರಿಸಿದ್ದಾರೆ. ನಿವೇದನೆಯ ನಂತರವೇ ಉಪವಾಸವನ್ನು ಕೊನೆಗೊಳಿಸುತ್ತಾರೆ. ಬಾಲಕನಿಗೆ ಇದು ಹೇಗೆ ಗೊತ್ತಾಯಿತು? ಗೊತ್ತಾದರೂ ತಾನೇ ಹೇಗೆ ಅವುಗಳನ್ನು ಬೇಡಲು ಸಾಧ್ಯ? ಆ ಇಬ್ಬರು ಬ್ರಾಹ್ಮಣರಿಗೆ ಈ ವಿಚಿತ್ರ ಸಂಗತಿ ತಿಳಿದು ಅದನ್ನು ತಿಳಿಯಲು ಇಬ್ಬರೂ ಧಾವಿಸಿ ಬಂದರು. ಆಶ್ಚರ್ಯಕರವೋ ಎಂಬಂತೆ ಇಬ್ಬರಿಗೂ ಶ್ರೀಕೃಷ್ಣನೇ ಬಾಲಕನಲ್ಲಿ ಪ್ರವೇಶಿಸಿ ನೈವೇದ್ಯವನ್ನು ಕೇಳುತ್ತಿದ್ದಾನೆ ಎಂಬಂತೆ ಭಾಸವಾಯಿತು. ಇಬ್ಬರೂ ನೈವೇದ್ಯಗಳನ್ನು ತಂದು ನಿಮಾಯಿಯ ಮುಂದಿಟ್ಟರು. ಬಾಲಗೋಪಾಲನೆಂದೇ ಬಗೆದು ಅವನಿಗೆ ಉಣ್ಣಿಸಿದರು. ನಂತರದ ದಿನಗಳಲ್ಲಿ ಅವರಿಬ್ಬರೂ ಶ್ರೀಚೈತನ್ಯರ ಕಟ್ಟಾ ಅನುಯಾಯಿಗಳಾದರು.

ಇದಕ್ಕಿಂತಲೂ ಅದ್ಭುತವಾದ ಪರಿವರ್ತನೆಯಾದದ್ದು ಮುರಾರಿ ಗುಪ್ತನಲ್ಲಿ. ಅವನೊಬ್ಬ ಅರೆಬರೆ ಅದ್ವೈತಿ. ಉನ್ನತ ಮಟ್ಟದ ತತ್ತ್ವ ವಿಚಾರವುಳ್ಳ ಮತ್ತು ಬಹು ಕ್ಲಿಷ್ಟವಾದ 'ಯೋಗವಾಸಿಷ್ಠ' ಗ್ರಂಥದಲ್ಲಿ ಇವನು ಪರಿಣತನಾಗಿದ್ದನು. ಶ್ರದ್ಧೆಯಿಂದ ಕೇಳುತ್ತಿದ್ದ ಶ್ರೋತೃಗಳಿಗೆ ಮುರಾರಿ ಗುಪ್ತ ಆ ಗ್ರಂಥವನ್ನು ವಿವರಿಸುತ್ತಿದ್ದಾಗ ಮಾಡುತ್ತಿದ್ದ ಹಾವಭಾವಗಳನ್ನೂ, ಪಾಂಡಿತ್ಯಪ್ರದರ್ಶನವನ್ನೂ ಬಾಲಕ ನಿಮಾಯಿ ಅನುಕರಿಸುತ್ತಾ, ಅವನನ್ನು ತಮಾಷೆ ಮಾಡುತ್ತಿದ್ದನು. 'ಎಂತಹ ವಕ್ರ ಬುದ್ಧಿಯ ಹುಡುಗ ನೀನು' ಎಂದು ನಿಮಾಯಿಯನ್ನು ಮುರಾರಿ ನಿಂದಿಸಿದನು. ಹುಡುಗನಿಗೆ ಕೋಪ ಬಂದಿತು 'ಹಾಗೋ, ಊಟದ ಸಮಯದಲ್ಲಿ ನಿನಗೆ ತಕ್ಕ ಪಾಠವನ್ನು ಕಲಿಸುತ್ತೇನೆ' ಎಂದು ಬೆದರಿಸಿದನು. ಒಂದು ದಿನ ಮುರಾರಿ ಊಟಕ್ಕೆ ಕುಳಿತಿದ್ದಾಗ, ನಿಮಾಯಿ ಎಲ್ಲಿಂದಲೋ ಸರಕ್ಕನೆ ಬಂದು ತಟ್ಟೆಯಲ್ಲಿ ಹಾಕಿಕೊಂಡಿದ್ದ ಆಹಾರವನ್ನು ಕೆಡಿಸಿಬಿಟ್ಟನು. ಮುರಾರಿಗೆ ದಿಗ್ಭ್ರಮೆಯಾಯಿತು. ತನ್ನ ಬೆರಗಿನ ಸ್ಥಿತಿಯಿಂದ ಸುಧಾರಿಸಿಕೊಂಡವನು, ಆ ಮಗು ನಿಮಾಯಿ ಹೇಳುವುದನ್ನು ಆಲಿಸಿದ. 'ಓ ಮುರಾರಿ, ಸರ್ವಶಕ್ತನಾದ ಭಗವಂತನೂ ಜೀವಿಯೂ ಒಂದೇ ಎಂದು ಹೇಳುವ ಮಿಥ್ಯೆ ಮತ್ತು ಅಪಾಯಕಾರಿಯಾದ ನಿನ್ನ ಸಿದ್ಧಾಂತವನ್ನು ತ್ಯಜಿಸು. ಈ ತೋರಿಕೆಗಳನ್ನು ಬಿಟ್ಟು, ಶ್ರೀಕೃಷ್ಣನನ್ನು ಪೂಜಿಸು.' ಈ ಘಟನೆ ಮುರಾರಿಯ ಮೇಲೆ ಅದ್ಭುತ ಪರಿಣಾಮವನ್ನು ಬೀರಿತು. ಮರುದಿನವೇ ಅವನು ಜಗನ್ನಾಥ ಮಿಶ್ರನ ಮನೆಗೆ ಹೋದನು, ನಿಮಾಯಿಯ ಕಾಲಿಗೆ ಬಿದ್ದನು. ಇದರಿಂದ ಅವನ ತಂದೆತಾಯಿಗಳು ಭಯಗೊಂಡರು. ವಿದ್ವಾಂಸನಾದ ಬ್ರಾಹ್ಮಣನೊಬ್ಬ ಬಾಲಕ ನಿಮಾಯಿಯನ್ನು ಹೀಗೆ ಗೌರವಿಸುವುದೆಂದರೇನು? ಅದು ಅವನಿಗೆ ಕೆಡಕು ತರುವುದು ಎಂದು ತಂದೆತಾಯಿಗಳ ಎಣಿಕೆ.

## ವಿದ್ಯಾಭ್ಯಾಸ ಹಾಗೂ ಪ್ರಾಧ್ಯಾಪಕ ವೃತ್ತಿ

ನಿಮಾಯಿಗೆ ಏಳು ವರ್ಷ ವಯಸ್ಸಾಗಿದ್ದಾಗ, ಹದಿನಾರರ ಹರೆಯದವನಾಗಿದ್ದ ಅವನ ಅಣ್ಣ ವಿಶ್ವೇಶ್ವರ ಮನೆ–ಮಠಗಳನ್ನು ತ್ಯಜಿಸಿ ಪರಿವ್ರಾಜಕನಾಗಿಬಿಟ್ಟ. ಈ ಅಗಲಿಕೆಯು ತಂದೆ–ತಾಯಿಗಳನ್ನು ಬಹಳ ದುಃಖಕ್ಕೀಡು ಮಾಡಿತು. ಈ ಘಟನೆಯಿಂದ ನಿಮಾಯಿಯೂ ಹೆಚ್ಚು ಗಂಭೀರನಾದ. ಅಲ್ಲಿಯವರೆಗೆ 'ತೋಲ್' ಗೆ (ಸಂಸ್ಕೃತ ಶಾಲೆ) ಹೋಗಲು ನಿರಾಕರಿಸಿಬಿಟ್ಟಿದ್ದ. ಆದರೆ ಈಗ ಅಧ್ಯಯನದಲ್ಲಿ ತೊಡಗಿದ. ತೀವ್ರ ಪ್ರಗತಿಯನ್ನೂ ತೋರಿಸಿದ. ಏಕೆಂದರೆ, ಅವನೊಬ್ಬ ಏಕಸಂಧಿಗ್ರಾಹಿ; ಒಮ್ಮೆ ಕೇಳಿದೊಡನೆಯೇ ಒಡನೆ ಗ್ರಹಿಸಿ ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದ. ಒಂಬತ್ತು ವರ್ಷ ವಯಸ್ಸಿನವನಿದ್ದಾಗ ಅವನಿಗೆ ಉಪನಯನವಾಯಿತು. ವೈದಿಕ

ಆಚರಣೆಗಳನ್ನು ಮಾಡಲು ಅಧಿಕಾರ ಕೂಡ ಸಿಕ್ಕಿತು. ಸ್ವತಃ ದೊಡ್ಡ ವಿದ್ವಾಂಸನಾದ ತಂದೆಗೆ ಇದನ್ನು ಕಂಡು ಬಹಳ ಸಂತೋಷವಾಯಿತು. ಆದರೆ ಅವನ ಈ ಹರ್ಷ ಅಲ್ಪಕಾಲ ದವ್ವಷ್ಟೇ ಆಗಿತ್ತು. ಏಕೆಂದರೆ, ಗುಣಪಡಿಸಲಾಗದ ಜ್ವರದಿಂದ ಪೀಡಿತನಾಗಿ, ಸ್ವಲ್ಪಕಾಲದಲ್ಲಿಯೆ ಆತನ ತಂದೆ ಮರಣ ವನ್ನಪ್ಪಿದ.

ಈಗ ತಾಯಿ ಶಚಿಯೇ ಬಾಲಕನ ಏಕಮಾತ್ರ ಪೋಷಕಿ ಯಾಗಿ ಕುಟುಂಬದ ಒಡೆತನವನ್ನು ವಹಿಸಿದಳು. ಅವಳು ನಿಮಾಯಿ ಉತ್ತಮ ಶಿಕ್ಷಣವನ್ನು ಪಡೆಯುವಂತೆ ನೋಡಿ ಕೊಂಡಳು. ಅದಕ್ಕಾಗಿ, ಪಂಡಿತ ಗಂಗಾದಾಸನ ಬಳಿ ಅವನನ್ನು ಕಳುಹಿಸಿದಳು. ಗಂಗಾದಾಸ ಕಳಂಕರಹಿತವಾದ ಚಾರಿತ್ರ್ಯ ವುಳ್ಳವನು, ಯಾರೂ ಮೀರಿಸಲಾರದ ಪಾಂಡಿತ್ಯವುಳ್ಳವನು. ಅಲ್ಪಕಾಲದಲ್ಲಿಯೇ, ಆತನ ಶಿಷ್ಯರಲ್ಲೆಲ್ಲ ನಿಮಾಯಿ ಅತ್ಯುತ್ತಮ ವಿದ್ಯಾರ್ಥಿಯೆನಿಸಿದನು. ತನ್ನ ಸಹಪಾಠಿಗಳಾದ ಕಮಲಾ ಕಾಂತ, ಕೃಷ್ಣಾನಂದ ಮತ್ತು ಮುರಾರಿ ಗುಪ್ತರನ್ನು ವಾದದಲ್ಲಿ ಮೂಲೆಗುಂಪು ಮಾಡಿಬಿಟ್ಟನು. ಆದರೆ, ನಾಡಿಯಾ ಪಂಡಿತರ ವಾಗ್ವಿವಾದದ ಜಾಡ್ಯ ನಿಮಾಯಿಯನ್ನೂ ತಟ್ಟಿತು. ಅಕ್ಕಪಕ್ಕದ ಸ್ಥಳಗಳಿಗೆ ಹೋಗಿ ಹೆಸರಾಂತ ಪಂಡಿತರಿಗೆ ಸವಾಲು ಹಾಕಲು ಆರಂಭಿಸಿದನು. ಇಷ್ಟು ಸಣ್ಣ ವಯಸ್ಸಿನಲ್ಲಿಯೇ ವ್ಯಾಕರಣ ಶಾಸ್ತ್ರದ ಮೇಲೆ ಗ್ರಂಥವೊಂದನ್ನೂ ರಚಿಸಿದನು. ವಿದ್ವತ್ತಿನ ನೆಲೆವೀಡಾದ ನಾಡಿಯಾದಲ್ಲಿ ಕೂಡಾ ಅದು ಬಹು ಪ್ರಸಿದ್ಧಿ ಯನ್ನು ಪಡೆಯಿತು. ಸಾಹಿತ್ಯ ಮತ್ತು ವ್ಯಾಕರಣಗಳನ್ನು ಕರಗತ ಮಾಡಿಕೊಂಡ ನಿಮಾಯಿ ನ್ಯಾಯಶಾಸ್ತ್ರದ ಅಧ್ಯಯನ ಮಾಡಲು, ಆ ಶಾಸ್ತ್ರದಲ್ಲಿ ನಿಪುಣನಾಗಿದ್ದ ವಾಸುದೇವ ಸಾರ್ವಭೌಮನನ್ನು ಆಶ್ರಯಿಸಿದ. ಅಲ್ಲಿಯೂ ಕೂಡ ಬಹು ಬೇಗನೆ ತನ್ನೆಲ್ಲ ಸಂಗಡಿಗರನ್ನೂ ಅಧ್ಯಯನದಲ್ಲಿ ಮೀರಿಸಿಬಿಟ್ಟ.

ಈಗಾಗಲೇ ನ್ಯಾಯಶಾಸ್ತ್ರದಲ್ಲಿ ದೀಧಿತಿ ಎಂಬ ಅಧಿಕೃತ ಗ್ರಂಥವನ್ನು ರಚಿಸಿದ್ದ ರಘುನಾಥನೂ ನಿಮಾಯಿಯ ಸಮಕ್ಕೆ ನಿಲ್ಲಲಾಗಲಿಲ್ಲ. ಗುರುವಾದ ವಾಸುದೇವ ಸಾರ್ವಭೌಮನು ಒಂದು ಗಹನವಾದ ನ್ಯಾಯಶಾಸ್ತ್ರದ ಸಮಸ್ಯೆಯನ್ನು ವಿಶ್ಲೇಷಿಸಲು ರಘುನಾಥನಿಗೆ ಹೇಳಿದನು. ಆ ಸಮಸ್ಯೆ 'ಹೇತ್ವಾಭಾಸ' ಎಂಬ ನ್ಯಾಯಶಾಸ್ತ್ರದ ವಿಭಾಗಕ್ಕೆ ಸೇರಿದ್ದಾಗಿತ್ತು. ರಘುನಾಥನಿಗೆ ಇದಕ್ಕೆ ಸರಿಯಾದ ಉತ್ತರವನ್ನು ಕಂಡುಕೊಳ್ಳಲು ಒಂದು ಇಡೀ ದಿನ ಬೇಕಾಯಿತು. ಇದೇ ಸಮಸ್ಯೆಯನ್ನು ನಿಮಾಯಿಯ ಮುಂದೆಯೂ ಇಡಲಾಯಿತು. ಅವನು ಕ್ಷಣಮಾತ್ರದಲ್ಲಿ ಅದನ್ನು ಪರಿಹರಿಸಿದನು. ನಿಮಾಯಿ ನ್ಯಾಯಶಾಸ್ತ್ರದ ಮೇಲೆ ಸ್ವಂತ ಕೃತಿಯನ್ನು ರಚಿಸುತ್ತಿದ್ದಾನೆ ಎಂದು ರಘುನಾಥನಿಗೆ ತಿಳಿದುಬಂತು. ರಘುನಾಥನೂ ತನ್ನದೇ ಆದ ಒಂದು ಗ್ರಂಥವನ್ನು ರಚಿಸುತ್ತಿದ್ದನು. ಅದು ನ್ಯಾಯಶಾಸ್ತ್ರದಲ್ಲಿ ಅತ್ಯುತ್ತಮ ಗ್ರಂಥ ಎಂದು ಪ್ರಶಂಸಿಸಲ್ಪಡುತ್ತದೆ ಎಂದು ನಂಬಿಕೊಂಡಿದ್ದನು. ಆದ್ದರಿಂದ, ನಿಮಾಯಿಯ ಕೃತಿ ತನ್ನ ರಚನೆಗೆ ಹೋಲಿಸಿದಲ್ಲಿ, ಯಾವ ಮಟ್ಟಕ್ಕೆ ನಿಲ್ಲುತ್ತದೆ ಎನ್ನುವುದನ್ನು ತಿಳಿಯಲು ಕಾತರನಾಗಿದ್ದನು. ಒಮ್ಮೆ ಅವರಿಬ್ಬರೂ ತಮ್ಮ ಗುರುಗಳ ವಿದ್ಯಾಕೇಂದ್ರಕ್ಕೆ ಹೋಗಲು ದೋಣಿಯಲ್ಲಿ ನದಿಯನ್ನು ದಾಟುತ್ತಿದ್ದರು. ಆಗ ರಘುನಾಥನು ನಿಮಾಯಿಯ ಪುಸ್ತಕದ ಕೆಲಭಾಗವನ್ನು ಕೇಳಲು ಇಚ್ಛಿಸಿದನು. ನಿಮಾಯಿ ಓದುತ್ತಿದ್ದಂತೆ, ರಘುನಾಥನ ಮುಖ ಕಪ್ಪಿಟ್ಟಿತು. ಅವನು ಕಣ್ಣೀರಿಡಲು ಆರಂಭಿಸಿದನು. ನಿಮಾಯಿಯ ಕೃತಿ ಬೆಳಕಿಗೆ ಬಂದರೆ, ಮುಂದೆ ನ್ಯಾಯಶಾಸ್ತ್ರದಲ್ಲಿ ಅತ್ಯುತ್ತಮ ಗ್ರಂಥ ರಚಿಸಿದನೆಂದು ಪ್ರಶಂಸೆಗಳಿಸುವ ತನ್ನ ಅಭಿಲಾಷೆ ಮಣ್ಣುಪಾಲಾಗುವುದೆಂದು ಅವನು ಮನಗಂಡಿದ್ದನು. ಸ್ವಲ್ಪವೂ ಅಳುಕದೆ ತನ್ನ ಪ್ರಿಯಮಿತ್ರನನ್ನು ಸಂತೈಸಲು ಮತ್ತು ಸಂತೋಷಪಡಿಸಲು ನಿಮಾಯಿ ತನ್ನ ಆ ಗ್ರಂಥವನ್ನು ಗಂಗೆಗೆ ಎಸೆದುಬಿಟ್ಟನು. ತನ್ನ ಸ್ನೇಹಿತನ ಮಹತ್ವಾಕಾಂಕ್ಷೆ ಕೈಗೂಡದೆ ಇರಬಾರದು ಎನ್ನುವುದೇ ಅವನು ಹೀಗೆ ಮಾಡಿದುದರ ಹಿಂದಿನ ಉದ್ದೇಶವಾಗಿತ್ತು. ಹೀಗೆ ಜಗತ್ತು ನ್ಯಾಯಶಾಸ್ತ್ರದ ಮೇಲೆ ಸರ್ವೋತ್ಕೃಷ್ಟ ಗ್ರಂಥವೊಂದನ್ನು ಕಳೆದುಕೊಂಡಿ ತಾದರೂ, ಅದರಿಂದ, ಮುಂದೆ ನಾವು ಕಾಣುವಂತೆ, ಭಗವತ್ ಪ್ರೇಮಪೂರಿತನಾದ ಮಹಾಪುರುಷನೊಬ್ಬನನ್ನು ಗಳಿಸಿ ಕೊಂಡಿತು.

ಹದಿನಾರನೆಯ ವಯಸ್ಸಿನಲ್ಲಿಯೇ ನಿಮಾಯಿ ತನ್ನದೇ ಆದ ಪಾಠಶಾಲೆಯನ್ನು ಆರಂಭಿಸಿದನು. ನಾಡಿಯಾದಲ್ಲಿಯೇ ಅತ್ಯಂತ ಚಿಕ್ಕ ವಯಸ್ಸಿನ ಪ್ರಾಧ್ಯಾಪಕನಾದರೂ ಅವನ ವಿದ್ವತ್ತಿಗೆ ಸಿಕ್ಕಿದ ಗೌರವ, ಅತ್ಯಧಿಕ ಸಂಖ್ಯೆಯ ವಿದ್ಯಾರ್ಥಿಗಳನ್ನು ಅವನ ಶಾಲೆಯ ಕಡೆ ಆಕರ್ಷಿಸಿತ್ತು. ಅದೇ ಸಮಯಕ್ಕೆ, ಅವನು 'ಲಕ್ಷ್ಮಿ' ಎನ್ನುವವಳನ್ನು ಮದುವೆಯಾದನು. ಅವಳ ತಂದೆ ನ್ಯಾಯಶಾಸ್ತ್ರದಲ್ಲಿ ಹೆಸರಾಂತ ಪಂಡಿತರಾಗಿದ್ದ ವಲ್ಲಭಾ ಚಾರ್ಯ ಎನ್ನುವವರು.

ಬಹು ದೊಡ್ಡ ಪಂಡಿತನಾಗಿದ್ದರೂ ನಿಮಾಯಿ ಇತರ ಪಂಡಿತರಂತೆ ಇರಲಿಲ್ಲ. ಬಾಲಕನಂತೆ ಸದಾ ಆನಂದಭಾವ ದಲ್ಲಿ ಇರುತ್ತಿದ್ದನು. ಅತ್ಯಂತ ಸುಂದರನಾಗಿದ್ದರೂ ತನ್ನ ಬುದ್ಧಿಮತ್ತೆಗಾಗಿ ಗೌರವಿಸಲ್ಪಟ್ಟಿದ್ದರೂ ಅವನು ವಿನೋದ ಭಾವದಲ್ಲಿಯೇ ಇರುತ್ತಿದ್ದನು. ತನ್ನ ಶಿಷ್ಯರೊಡನೆ ಈಜುತ್ತಿದ್ದನು. ರಸ್ತೆಗಳಲ್ಲಿ ಆಚೀಚೆ ಓಡುತ್ತಿದ್ದನು ಮತ್ತು ಆಟವಾಡುತ್ತಿದ್ದನು. ವಿಶೇಷವೆಂದರೆ, ಶಿಷ್ಯರಲ್ಲಿ ಅನೇಕರು ನಿಮಾಯಿಗಿಂತಲೂ ವಯಸ್ಸಿನಲ್ಲಿ ದೊಡ್ಡವರಾಗಿದ್ದರು!

ಏಕೋ ಏನೋ ಆ ಸಮಯದಲ್ಲಿ ವೈಷ್ಣವ ಪಂಥದವರನ್ನು ರೇಗಿಸುವುದು ನಿಮಾಯಿಗೆ ಒಂದು ಚಟವೇ ಆಗಿಬಿಟ್ಟಿತ್ತು.

ಅದಕ್ಕೆಂದೇ, ಮುಕುಂದನೆಂಬ ಹೆಸರಾಂತ ವೈಷ್ಣವ ನಿಮಾಯಿಯ ಕಣ್ಣು ತಪ್ಪಿಸಿ ಓಡಾಡುತ್ತಿದ್ದನು. ಆದರೂ ಒಮ್ಮೆ ನಿಮಾಯಿ ಅವನಿಗೆ ಎದುರಾದನು. 'ನೀನು ನನ್ನನ್ನು ದೂರ ವಿರಿಸುತ್ತೇಯೆ, ಕಾರಣ ನಾನೊಬ್ಬ ನಾಸ್ತಿಕ, ಮತನಿಂದಕ ಎಂದು ಎಣಿಸಿದ್ದೀಯೆ. ಕಾಲಾಂತರದಲ್ಲಿ, ನಾನೂ ಒಬ್ಬ ವೈಷ್ಣವ ನಾಗುತ್ತೇನೆ. ಆದರೆ ನಿನ್ನಂತಹ ಕಪಟಿಯಾಗಲಾರೆ.' ಎಂದನು.

ನಿಮಾಯಿಯ ತಂದೆಯ ಆತ್ಮೀಯ ಗೆಳೆಯ ಶ್ರೀವಾಸ ಎಂಬುವವನು ಒಮ್ಮೆ ಅವನನ್ನು ವೈಷ್ಣವ ಪಂಥವನ್ನು ಸೇರಿ, ಆದರ್ಶಜೀವನವನ್ನು ನಡೆಸೆಂದು ಸಲಹೆ ಕೊಡುತ್ತಾನೆ. ಆಗ ನಿಮಾಯಿ ಕೊಟ್ಟದ್ದು ಪರಿಹಾಸ್ಯ-ಗಾಂಭೀರ್ಯಗಳು ಬೆರೆತ ಉತ್ತರ: 'ಸರಿ, ಪೂಜ್ಯರೇ, ಆದರೆ ನೋಡಿ, ನಾನು ಈ ಸಣ್ಣ ವಯಸ್ಸಿನಲ್ಲೇ ಪ್ರಾಧ್ಯಾಪಕನಾಗಿಬಿಟ್ಟಿದ್ದೇನೆ. ವಾಗ್ವಿವಾದಗಳಲ್ಲಿ ನನಗೆ ತಪ್ಪದೇ ಸಿಕ್ಕುತ್ತಿರುವ ವಿಜಯದ ಆನಂದವನ್ನು ಅನುಭವಿಸಲು ಇನ್ನೂ ಕೆಲ ಕಾಲ ಅವಕಾಶ ಕೊಡಿ. ನನಗಿದೆಲ್ಲಾ ಬೇಡವೆನಿಸಿದಾಗ, ನಿಮ್ಮ ಸಲಹೆಯನ್ನು ಪರಿಶೀಲಿಸುವೆ.'

ನಿಮಾಯಿ ಪಾಠಶಾಲೆಯಲ್ಲಿ ದಿನೇ ದಿನೇ ಹೆಚ್ಚುತ್ತಿದ್ದ ವಿದ್ಯಾರ್ಥಿಗಳಿಗೆ ಉಪದೇಶಿಸುತ್ತಾ, ವಾದಗಳಲ್ಲಿ ಇತರ ವಿದ್ವಾಂಸರಿಗೆ ಸವಾಲೆಸೆಯುತ್ತ ತನ್ನ ಬಾಳನ್ನು ಸವೆಸುತ್ತಿದ್ದನು. ಒಮ್ಮೆ ಪೂರ್ವ ದಿಕ್ಕಿನ ಪ್ರದೇಶಗಳಲ್ಲಿ, ಅಲ್ಲಿನ ಪಂಡಿತರೆದುರು ಸೆಣಸಲೆಂದೇ ವಿದ್ವತ್‌ಯಾತ್ರೆಯನ್ನು ಕೈಗೊಂಡನು. ಅವನು ಹೋಗುವುದಕ್ಕಿಂತ ಮುಂಚೆಯೇ ಅವನ ಕೀರ್ತಿ ಅಲ್ಲೆಲ್ಲಾ ಹರಡಿತ್ತು. ಹೀಗಾಗಿ ಅವನಿಗೆ ಎಲ್ಲ ಕಡೆಯೂ ಭಾರೀ ಸುಸ್ವಾಗತವೇ ಕಾದಿತ್ತು.

ಆ ಸಂದರ್ಭದಲ್ಲಿಯೇ ನಿಮಾಯಿಯನ್ನೇ ಚಕಿತಗೊಳಿಸಿದ ಸಂಗತಿಯೊಂದು ನಡೆಯಿತು. ಉಳಿದವರೂ ಇದನ್ನು ಕಂಡು ಆಶ್ಚರ್ಯಗೊಂಡರು. ಅದೇನೆಂದರೆ, ತಪನ ಮಿಶ್ರನೆಂಬ ವೃದ್ಧ ಬ್ರಾಹ್ಮಣ ಭಕ್ತ, ನಿಮಾಯಿಗೆ ತೋರಿದ ಅಪೂರ್ವ ಗೌರವ. ಮಿಶ್ರನು ನಿಮಾಯಿಯ ಬಳಿಸಾರಿ ಕಾಲುಗಳಿಗೆ ಎರಗಿದನು. ದಿವ್ಯವಾಣಿಯೊಂದು ತನಗೆ ನಿಮಾಯಿ ಪಂಡಿತನಲ್ಲಿ ಶರಣುಹೋಗಲು ನಿರ್ದೇಶಿಸಿದೆ ಎಂದು ಹೇಳಿದನು. ನಿಮಾಯಿ ಪಾಪಾತ್ಮರನ್ನು ಉದ್ಧರಿಸಲೆಂದೇ ಈ ಭುವಿಯಲ್ಲಿ ತಳೆದ ಭಗವಂತನಲ್ಲದೇ ಬೇರಲ್ಲ ಎಂದು ಆ ದಿವ್ಯ ವಾಣಿ ತನಗೆ ಸೂಚಿಸಿದೆ ಎಂದೂ ನಿವೇದಿಸಿದನು. ಶ್ರೀಚೈತನ್ಯನು ಅವತಾರಪುರುಷನೆಂದು ಗುರುತಿಸಿದವರಲ್ಲಿ ಈ ತಪನ ಮಿಶ್ರನೇ ಮೊದಲಿಗನೆಂದು ಕಾಣುತ್ತದೆ.

ಒಂದು ವರ್ಷ ಕಳೆದು, ತನ್ನ ದಿಗ್ವಿಜಯ ಯಾತ್ರೆಯಿಂದ ಹಿಂತಿರುಗಿ ಬಂದ ನಿಮಾಯಿಗೆ ದಾರುಣವಾದ ಸುದ್ದಿ ಕಾದಿತ್ತು. ಅವನ ಪತ್ನಿ ಲಕ್ಷ್ಮಿ ಹಾವು ಕಡಿದು ಅಸುನೀಗಿದ್ದಳು. ಹಾಗಿದ್ದರೂ ನಿಮಾಯಿ ಪಾಠಪ್ರವಚನಗಳಿಂದ ಕೂಡಿದ ತನ್ನ ಬಾಳನ್ನು ಮುಂದುವರಿಸಿಕೊಂಡೇ ಹೋದನು. ಅಸಂಖ್ಯಾತ ವಿದ್ಯಾರ್ಥಿಗಳನ್ನು ಆಕರ್ಷಿಸಿದನು. ವಿದ್ಯೆಯ ಪೋಷಕರಾಗಿದ್ದ ಶ್ರೀಮಂತರಿಂದ ಅಧಿಕ ಮೊತ್ತದ ಸಂಭಾವನೆಗಳೂ ಬರುತ್ತಿದ್ದವು. ಬಂದ ವರಮಾನದಲ್ಲಿ ಎಳ್ಳಷ್ಟನ್ನೂ ನಿಮಾಯಿ ತನಗಾಗಿ ವಿನಿಯೋಗಿಸುತ್ತಿರಲಿಲ್ಲ. ಅವೆಲ್ಲವನ್ನೂ ಕುಟುಂಬದ ಯಜಮಾನಿಯಾಗಿದ್ದ ತನ್ನ ತಾಯಿಗೆ ಕೊಟ್ಟುಬಿಡುತ್ತಿದ್ದನು.

ಇದೇ ಸಮಯದಲ್ಲಿ ಕೇಶವ ಎನ್ನುವ ದೊಡ್ಡ ವಿದ್ವಾಂಸನೊಬ್ಬನು ನಾಡಿಯಾಕ್ಕೆ ಬಂದನು. ಅಲ್ಲಿನ ಪಂಡಿತರಿಗೆಲ್ಲಾ ಸವಾಲೆಸಗಿದನು. ಬೆಳದಿಂಗಳು ಹರಡಿದ್ದ ಒಂದು ರಾತ್ರಿ ನಿಮಾಯಿಯನ್ನು ಭೇಟಿಯಾದ ಕೇಶವ ಅವನನ್ನು ತಿರಸ್ಕಾರದಿಂದ ಕಂಡನು. ನಿಮಾಯಿ ಮಾತೆತ್ತದೆ ತನಗಾದ ಅಪಮಾನವನ್ನು ನುಂಗಿಕೊಂಡನು. ವಿಚಾರವಿನಿಮಯದ ವಿಷಯವಾಗಿ, ನಿಮಾಯಿ ಕೇಶವನನ್ನು ಕುರಿತು, ಪಾವನ ಗಂಗಾನದಿಯ ಶ್ರೇಷ್ಠತೆಯನ್ನು ಶ್ಲೋಕವೊಂದರ ರೂಪದಲ್ಲಿ ಬಣ್ಣಿಸುವಂತೆ ಕೇಳಿಕೊಂಡನು. ಕೇಶವನು ಅನಾಯಾಸವಾಗಿ, ಒಂದೇನು, ನೂರು ಪದ್ಯಗಳನ್ನು ಕ್ಷಣಮಾತ್ರದಲ್ಲಿ ರಚಿಸಿದನು. ಆ ಶ್ಲೋಕಗಳು ಅದ್ಭುತವಾಗಿದ್ದವು. ಇದನ್ನು ಕಂಡು ಎಲ್ಲರೂ ಆಶ್ಚರ್ಯಪಟ್ಟರು. ಕೇಶವನನ್ನು ಪ್ರಶಂಸಿಸಿದರು. ನಿಮಾಯಿ ಅವನನ್ನು ಅಷ್ಟಕ್ಕೇ ಬಿಡಲಿಲ್ಲ. ಆ ನೂರು ಶ್ಲೋಕಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ಅದನ್ನು ವಿಶ್ಲೇಷಿಸಿ, ಅದರಲ್ಲಿರುವ ಕಾವ್ಯಸೌಂದರ್ಯವನ್ನು ಎತ್ತಿ ತೋರಿಸುವಂತೆ ಕೇಳಿಕೊಂಡನು. ಹಾಗೆ ಆರಿಸುವಂತೆ ಕೇಶವನೇ ಹೇಳಿದಾಗ, ನಿಮಾಯಿ ಮಧ್ಯದ ಒಂದು ಶ್ಲೋಕವನ್ನು ಉಚ್ಚರಿಸುತ್ತಾನೆ. ಅದನ್ನು ಅವನು ಕೇಳಿದ್ದು ಒಂದೇ ಬಾರಿ. ಅಷ್ಟೇ ಅಲ್ಲ, ಕಾವ್ಯಮೀಮಾಂಸಾ ಶಾಸ್ತ್ರದ ವಿಧಿಗಳನ್ನು ಉಲ್ಲಂಘಿಸಿ ಮಾಡಿದ ಐದು ತಪ್ಪುಗಳನ್ನು ಆ ಶ್ಲೋಕದಲ್ಲಿ ಎತ್ತಿ ತೋರಿಸುತ್ತಾನೆ. 'ಜಗದ್ವಿಜಯಿ' ಎಂದು ತನ್ನನ್ನು ಕರೆದುಕೊಳ್ಳುತ್ತಿದ್ದ ಕೇಶವ ಹೀಗೆ ಅಪಮಾನಕ್ಕೆ ಈಡಾಗಬೇಕಾಯಿತು. ತನಗಾದ ಅವಮಾನದಿಂದ ತತ್ತರಿಸಿದ ಕೇಶವನಿಗೆ, ಅಂದು ರಾತ್ರಿ ಸಾಂತ್ವನಗೊಳಿಸುವ ಕನಸೊಂದು ಬಿದ್ದಿತು ಎನ್ನುತ್ತಾರೆ. ಅದರಲ್ಲಿ ದೇವಿ ಸರಸ್ವತಿಯೇ ಮೈದೋರಿ ಬಂದು, ನಿಮಾಯಿ ಭಗವಾನ್ ಕೃಷ್ಣನ ಅವತಾರವೇ ಎಂದು ಹೇಳಿದಳಂತೆ.

ಕೇಶವನ ಸೋಲು, ಆ ಪ್ರದೇಶದಲ್ಲಿ ನಿಮಾಯಿಯನ್ನು ಯಾರಿಗೂ ಸಾಟಿಯಿಲ್ಲದಂಥ ಪಂಡಿತನನ್ನಾಗಿ ಮಾಡಿತು. ತನ್ನ ಪ್ರೀತಿಯ ಪುತ್ರ, ಬಾಳಿನಲ್ಲಿ ಸಾಧಿಸಬಹುದಾದುದನ್ನೆಲ್ಲ ಸಾಧಿಸಿದ್ದಾನೆ ಎಂದು ಅವನ ತಾಯಿ ಎಣಿಸಿದಳು. ಆದರೆ ಹೆಂಡತಿಯ ವಿರಹವೊಂದೇ ಅವನನ್ನು ಕಾಡುತ್ತಿತ್ತು. ಕೆಲ ದಿನಗಳಲ್ಲಿ ಆ ಕೊರತೆಯೂ ನೀಗಿತು. ಆ ಊರಿನ ಧನವಂತ ಮತ್ತು ಕೀರ್ತಿವಂತ ಪಂಡಿತನೊಬ್ಬನ ಮಗಳಾದ ವಿಷ್ಣುಪ್ರಿಯೆ ಎಂಬುವಳ ಜತೆ ನಿಮಾಯಿಯ ಮರುವಿವಾಹವಾಯಿತು.

(ಮುಂದುವರಿಯುವುದು)